# ನನ್ನ ತಲೆಹರಟೆಗೀಗ ಇಪ್ಪತ್ತೈದು ವಾರ !

ಪರಿಣೀತದಿಂದ ಕೊಡಚಾದ್ರಿಯವರೆಗೆ ನನ್ನ ತಲೆ'ಹರಟೆ'ಗೀಗ ಇಪ್ಪದ್ದೈದು ಬರಹಗಳ ವಯಸ್ಸು! ಎಲ್ಲದಕ್ಕಿಂತ ಮೊದಲು ನನ್ನ ತಲೆ'ಹರಟೆ'ಯ ತಲೆನೋವನ್ನು ಸಹಿಸಿಕೊಂಡು, ಆ ತಲೆನೋವನ್ನು ನಿಮ್ಮ ಸ್ನೇಹಿತರಿಗೂ ಹಂಚಿ, ನನ್ನ ತಲೆ'ಹರಟೆ' ಎಲ್ಲೆಡೆ ಹರಡುವಂತೆ ಮಾಡಿದ ನಿಮಗೆಲ್ಲರಿಗೂ ಒಂದು ದೊಡ್ಡ 'ಥ್ಯಾಂಕ್ಸ್'!

ಪರಿಣೀತ ಚಲನಚಿತ್ರ ಬಂದಾಗ ಅದೇ ಹೆಸರಿನ ಮಹಿಳೆಯೊಬ್ಬರ (ಆಕೆ ಐಎಎಸ್ಸೋ, ಕೆಎಎಸ್ಸೋ ಇರಬೇಕು) ಪರಿಚಯಾತ್ಮಕ ಲೇಖನ ಬಹಳ ಹಿಂದೆ 'ತರಂಗ'ದಲ್ಲೆಲ್ಲೋ ಓದಿದ ನೆನಪಾಯಿತು. ಜೀವನದಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಏರುತ್ತಿದ್ದ ಆಕೆ ತನ್ನ ಮದುವೆಯ ಬಗ್ಗೆ ಲೇಖನದಲ್ಲೆಲ್ಲೋ ಒಂದು ಕಡೆ 'ಹುಟ್ಟಿನಿಂದಲೇ ಪರಿಣೀತಾ (ಮದುವೆಯಾದವಳು) ಎಂದು ಹೆಸರು ಹೊತ್ತ ನನ್ನ ವೈವಾಹಿಕ ಜೀವನ ಮಾತ್ರ ದುಃಖದ ಮಡುವಾಯಿತು', ಎಂದು ವಿಷಾದ ಪಟ್ಟಿದ್ದರು, ಅದರ ಪಕ್ಕದಲ್ಲಿ ಆಕೆ ಮತ್ತು ಆಕೆಯ ಮುದ್ದು ಮಗಳ ಭಾವಚಿತ್ರ!

ಪರಿಣೀತ ಬರೆದು ನನ್ನೆಲ್ಲ ಸ್ನೇಹಿತರಿಗೆ ಕಳುಹಿಸಿದೆ, ಒಂದೆರೆಡು ಉತ್ತರಗಳೂ ಬಂದವು. ಆ ಸಮಯದಲ್ಲಿ ನನಗೆ ಬಹಳ ದಿನದಿಂದ ಹುಡುಕುತ್ತಿದ್ದ ಆಶಾ ಭೋಂಸ್ಲೆಯ 'ಮೇರಾ ಕುಛ್ ಸಾಮಾನ್' ಹಾಡು ಸಿಕ್ಕಿತ್ತು. ಕೇಳುತ್ತ ಕೇಳುತ್ತ ಇದರ ಬಗ್ಗೆಯೂ ಸ್ನೇಹಿತರೊಡನೆ ಹೇಳಿಕೊಳ್ಳಬೇಕು ಅಂದುಕೊಂಡು ಎರಡನೆ ಹರಟೆ 'ಅನುಮತಿ' ಬರೆದೆ, ಇನ್ನಷ್ಟು ರಿಪ್ಲೈಗಳು ಬಂದವು. ಮೂರನೆಯ ಹರಟೆ 'ಹೆಸರಿಲ್ಲದ ಒಂದು ಸ್ವಗತ' ಬರೆದೆ ನೋಡಿ, ಶುರುವಾಯಿತು ನನ್ನ ತಲೆ ಹರಟೆ!

ನಿಜ ಹೇಳಬೇಕೆಂದರೆ 'ಹೆಸರಿಲ್ಲದ ಒಂದು ಸ್ವಗತ' ನಾನು 'ಓ ಮನಸೇ' ಪತ್ರಿಕೆಯ 'ನನ್ನ ಬೆಸ್ಟ್ ಡೇ' ಎಂಬ ವಿಭಾಗಕ್ಕೆ ಕಳುಹಿಸಲು ಬರೆದಿದ್ದ ಬರಹ! ಬರಹವನ್ನೇನೋ ಕಳುಹಿಸಿದೆ, ಪ್ರಕಟವಾಗಲಿಲ್ಲ :( ಸರಿ, 'ಅನುಮತಿ'ಯ ನಂತರ ಅದೇ ಹರಟೆ ಹೊಡೆದೆ, ರಿಪ್ಲೈಗಳ ಮಹಾಪೂರವೇ ಹರಿದು ಬಂತು. ಹರಟೆಯನ್ನು ಓದಿದ ಸ್ನೇಹಿತರು, ಅದನ್ನು ಅವರವರ ಸ್ನೇಹಿತರಿಗೆ ಕಳುಹಿಸಿಕೊಂಡರು, ಆ ಸ್ನೇಹಿತರೆಲ್ಲ ನನಗೆ ಬರೆದರು ಮತ್ತು ತಂತಮ್ಮ ಸ್ನೇಹಿತರಿಗೆ ಕಳುಹಿಸಿಕೊಂಡರು, ಹೀಗೆ ಅದುವರೆಗೂ ನೋಡಿಯೇ ಇರದಿದ್ದ ಸ್ನೇಹಿತರೆಲ್ಲ ನನಗೆ ಉತ್ತರಿಸಿ 'ಚೆನ್ನಾಗಿದೆ', 'ನನ್ನ ಅನುಭವವೇ ಅಂತಾ ಅನಿಸ್ತು' ಅಂತೆಲ್ಲ ಬರೆಯಲಾರಂಭಿಸಿದರಲ್ಲ, ನಾನು ಮೆಲ್ಲನೆ ಅವರಿಗೆಲ್ಲ ಮರು-ಉತ್ತರ ಕಳುಹಿಸಲಾರಂಭಿಸಿದೆ. 'ನಾನು ನಿಮ್ಮ ಇ-ಮೇಲ್ ವಿಳಾಸವನ್ನ ನನ್ನ ಮೇಲಿಂಗ್ ಲಿಸ್ಟ್‌ನಲ್ಲಿ ಸೇರಿಸಿಕೊಳ್ಳಲೇ? ಅದೂ ಇದೂಂತ ಫಾರ್‌ವರ್ಡೆಡ್ ಮೇಯ್ಲ್‌ಗಳ ಕಳುಹಿಸಿ ನಿಮ್ಮ ಮೇಯ್ಲ್‌ಬಾಕ್ಸ್‌ನ ಖಂಡಿತಾ ತುಂಬಿಸೊಲ್ಲ!' ಎಲ್ಲರೂ ನನ್ನ ಈ ಹೊಸಾ ವರಸೆಗೆ ಸುಸ್ತಾಗಿ 'ಅಸ್ತು' ಅಂದರು. ಅಲ್ಲಿಂದ ಶುರುವಾಯಿತು ನನ್ನ ಪೂರ್ಣಪ್ರಮಾಣದ ತಲೆ'ಹರಟೆ'!

ಈ ಇಪ್ಪತ್ತೈದು ಹರಟೆಗಳನ್ನು ಬರೆಯಲು ಮೂವತ್ತಕ್ಕೂ ಹೆಚ್ಚು ವಾರಗಳನ್ನು ತೆಗೆದುಕೊಂಡಿದ್ದೇನೆ, ಎಕ್ಸಾಮ್ಸ್ ಬಂದಾಗ, ಮೂಡಿಲ್ಲದೇ ಹೋದಾಗ, ಸಕ್ಕತ್ ಬ್ಯುಸಿಯಾದಾಗಲೆಲ್ಲ(!) ಹರಟೆಗೆ ಖೋಕ್! ನನಗನಿಸಿದ್ದು, ನನ್ನ ಮನಸ್ಸು, ಭಕ್ತಿ-ಭಾವಗಳು, ವಿಚಾರಗಳೆಡೆಗಿನ ನನ್ನ ದೃಷ್ಟಿಕೋನಗಳು, ಅಭದ್ರತೆಗಳು, ನನ್ನ ಅಭಿರುಚಿಗಳೆಲ್ಲವನ್ನೂ ಹಂಚಿಕೊಂಡಿದ್ದೇನೆ. ಇವುಗಳನೆಲ್ಲವನ್ನೂ ಉಪದೇಶ ಮಾಡದೇ, ನಿರ್ಧಾರಕವಾಗಿ ಏನನ್ನೂ ಹೇಳದೇ, ಯಾವುದಕ್ಕೂ 'ಇದು ಹೀಗೇ' ಎಂದು ತೀರ್ಪು ಕೊಡದೇ 'ನನಗನಿಸಿದ್ದು ಇದು, ನೀವೇನಂತೀರಿ?','ಇದು ನನ್ನದೇ ಮನಸಿನ ಒಳಮಾತು, ನಿಮಗಿಷ್ಟವಾಯಿತೇ?' ಅನ್ನೋ ಧಾಟಿಯಲ್ಲೇ ಬರೆಯಬೇಕೆಂದು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿದ್ದ ಒಂದು ಜಾಗೃತ ನಿರ್ಧಾರವೊಂದನ್ನು ಬಿಟ್ಟರೆ ಈ ಹರಟೆಗಳೆಲ್ಲ ಬಹುಪಾಲು ತಂತಾವೇ ಮೂಡಿದಂತವುಗಳು; ತಮಗೆ ತಾವೇ ಈ ಹುರಿಗೊಳಿಸಿದ ಮನಸಿನೊಳಗೆ ಮೂಡಿ, ಗರ್ಭಸ್ಥವಾಗಿ, ತಿಣುಕಾಡಿ, ಬರೆಯುವರೆಗೂ ಬಿಡದೇ ಕಾಡಿಸಿದಂತವು.. (ಒಮ್ಮೆ ಮಾತ್ರ ಫಿಲ್ಲರ್‌ನಂತೆ ಬಳಸಿದ ನನ್ನ ಹಳೆಯ ಕವನಗಳ ಹೊರತುಪಡಿಸಿ ;) ). ಕೆಲವು ಹರಟೆಗಳಂತೂ ನನ್ನನ್ನು ರಾತ್ರಿಯೆಲ್ಲ ಕೂರಿಸಿ ಬರೆಸಿಕೊಂಡಿವೆ (ಶಬರಿ, ಇದು ಮೊದಲನೇ ಹಾಡು), ಕೆಲವು ನೆನಪಿನಲ್ಲೇ ಉಳಿದಿದ್ದು ನೆನಪಾದಾಗಲೆಲ್ಲ ಕಣ್ಣೀರ ತರಿಸಿವೆ (ನೆನಪಿಲ್ಲದವರೊಬ್ಬರ ನೆನಪಿನಲ್ಲಿ, ರಂಗ ಬಾರೋ, ಸಾವು-ನೋವು ಮತ್ತು ಸುದ್ದಿ).

ಪರಿಣೀತದಿಂದ ಕೊಡಚಾದ್ರಿಯವರೆಗೂ ಎಲ್ಲ ಹರಟೆಗಳಿಗೆ ನನಗೆ ಅಸಂಖ್ಯ ಈ-ಮೇಯ್ಲುಗಳು, ಕೆಲವು ದೂರವಾಣಿ ಕರೆಗಳು ಬಂದಿವೆ; ಫಾರ್ವರ್ಡ್ ಆಗಿ ಹೋದಲ್ಲೆಲ್ಲ ನನ್ನ ಹರಟೆಗಳು ಎಲ್ಲರ ನಡುವಿನ ಹರಟೆಗಳಿಗೆ ಕಾರಣವಾಗಿವೆ; ಅರಿಯದಿದ್ದ, ನೋಡಿಯೇ ಇರದಿದ್ದ ಹೊಸ-ಹೊಸ ಸ್ನೇಹಿತ-ಸ್ನೇಹಿತೆಯರು ಸೃಷ್ಟಿಯಾಗುತ್ತಿದ್ದಾರೆ;

ಮೊನ್ನೆ ಕೊಡಚಾದ್ರಿಯನ್ನೋದಿ ನನ್ನೊಬ್ಬ ಹಳೆಯ ಸ್ಕೂಲಿನ-ಸ್ನೇಹಿತನೊಬ್ಬ ಹೇಳುತ್ತಿದ್ದ, 'you are one of few persons, whom I feel jealous of' ನನಗಿಂತಲೂ ಚೆನ್ನಾಗಿ ಓದಿ, ನನಗಿಂತಲೂ ಉತ್ತಮ ಕೆಲಸ-ಹುದ್ದೆ-ಸ್ಥಾನದಲ್ಲಿರುವ ಅವನಿಂದ ಪಡೆದ ಉತ್ತಮ ಕಾಂಪ್ಲಿಮೆಂಟ್ ಇದು. ಎಸ್‌ಟಿಪಿಐನಲ್ಲಿ ಕೆಲಸ ಮಾಡುವ ಹರಟೆ-ಸ್ನೇಹಿತೆಯೊಬ್ಬಳು ನನ್ನ ಪ್ರತೀ ಹರಟೆಗೆ ಪ್ರತಿಕ್ರಿಯಿಸುತ್ತಾಳೆ, ಅವುಗಳ ಆಳ ಬಗೆಯಲು ಪ್ರಶ್ನೆಗಳ ಕೇಳುತ್ತಾಳೆ, 'ಯಾರವಳು, ಅವಳ ಹೆಸರೇನು? ಇದು ನಿನ್ನ ಕತೆಯೋ ಅಥವಾ ಕಲ್ಪನೆಯೋ? ಇದೆಲ್ಲ ನಿನಗೆ ಹೇಗೆ ಹೊಳೆಯುತ್ತೆ? ನನ್ನಂತ ಸ್ನೇಹಿತೆಯೊಂದಿಗೂ ಹಂಚಿಕೊಳ್ಳೋಲ್ವಾ?' ನಾನಾಗೇ 'ಸಾಕಮ್ಮ ತಾಯಿ, ಇದೇ ಕಡೇ ಉತ್ತರ, ಮತ್ತೊಂದು ಪ್ರಶ್ನೆಯನ್ನೆಸೆಯಬೇಡ' ಅನ್ನುವವರೆಗೂ ಸುಮ್ಮನಾಗುವುದಿಲ್ಲ :) ದೂರದೂರಿನಲ್ಲಿರುವ ಹರಟೆ-ಸ್ನೇಹಿತನೊಬ್ಬ ಐಟಿ ಮೇಳಕ್ಕೆ ಬಂದವನು, ಮದ್ಯಾಹ್ನ ಟ್ರೈನಿಗೆ ಹೊರಟಿದ್ದವನು ಬಂದು ಇಪ್ಪತ್ತು ನಿಮಿಷಗಳಿಗೋಸ್ಕರ ನನ್ನನ್ನು ಭೇಟಿಯಾಗಿ, ನನ್ನೊಡನೆ ಹರಟಿ, ಖುಷಿಯಾಗಿ ವಾಪಸ್ಸು ಹೋದ (ಆಮೇಲೆ ಅವನ ಮೇಯ್ಲುಗಳೇ ನಿಂತುಹೋದವು ಎಂಬುದು ಬೇರೆ ಮಾತು!) 'ಐಟಿ ಫೀಲ್ಡ್‌ನಲ್ಲೂ ಇಷ್ಟೊಂದು ಚೆನ್ನಾಗಿ ಕನ್ನಡ ಬರಿಯೋ ಹುಡುಗರಿದ್ದಾರೆ ಅಂದ್ರೆ ಸಕತ್ ಖುಷಿಯಾಗುತ್ತೆ ಅಂತಾರೆ ನನ್ನಮ್ಮ, ನಿನ್ನೆಲ್ಲ ಹರಟೆಗಳನ್ನು ನಾನು ಮನೆಗೊಯ್ದು ಅವರಿಗೆ ಓದಲು ಕೊಡ್ತೇನೆ' ಅಂದಿದ್ದು ಇನ್ನೊಬ್ಬ ಸ್ನೇಹಿತ. 'ಸುಮ್ಮನೆ ನನ್ನ ಸ್ನೇಹಿತನಿಂದ ಫಾರ್ವರ್ಡಿಸಿದ್ದ ನಿಮ್ಮ ಹರಟೆಯನ್ನೋದಿ ನಿಮ್ಮ ವೆಬ್‌ಸೈಟ್‌ಗೆ ಲಗ್ಗೆ ಹಾಕಿದ್ದೇನೆ, ಅವೆಲ್ಲ ಹರಟೆಗಳನ್ನೋದುವವರೆಗೂ ನೆಮ್ಮದಿಯಿಲ್ಲ' ಎಂದೊಬ್ಬ ಸ್ನೇಹಿತ ಮೇಯ್ಲ್ ಮಾಡಿದ್ದ, 'ದೂರದ ಈ ಯುಎಸ್‌ನಲ್ಲಿ ಒಂಟಿಯಾಗಿರುವ ನನಗೆ ಕ್ರಿಸ್‌ಮಸ್ ರಜೆ ಕಳೆಯಲು ನಿನ್ನ ಹರಟೆಗಳು ತುಂಬಾ ಸಹಾಯ ಮಾಡಿದವು' ಅಂತೊಬ್ಬ ಸ್ನೇಹಿತ ಬರೆದಿದ್ದ. ಇನ್ನೊಬ್ಬ, 'ನನಗೆ ಅನಿಸಿದ್ದನ್ನೇ ಎಷ್ಟು ಚೆನ್ನಾಗಿ ಬರೆದಿದ್ದೀಯ, ಓದ್ತಾ ಇದ್ರೆ ಇವೆಲ್ಲ ನನ್ನವೇ ನೆನಪುಗಳು ಅನಿಸಿಬಿಡುತ್ವೆ' ಅಂತೊಬ್ಬ ಸ್ನೇಹಿತ ಸೋಜಿಗಪಟ್ಟುಕೊಂಡಿದ್ದ. 'ನನ್ನೊಬ್ಬ ಸ್ನೇಹಿತ ಫಾರ್ವರ್ಡ್ ಮಾಡಿದ್ದ ನಿನ್ನ ಹರಟೆಯನ್ನೋದಿದೆ, ನೀನ್ಯಾರಾದರೂ ಆಗಿರು(!) ತುಂಬಾ ಚೆನ್ನಾಗಿ ಬರಿತೀಯ' ಅಂದವರಿದ್ದಾರೆ. ಇದೂವರೆಗೂ ಒಮ್ಮೆಯೂ ಮೇಯ್ಲು ಮಾಡದ ನನ್ನ ಸ್ನೇಹಿತನ ಸ್ನೇಹಿತನೊಬ್ಬ ಮೊನ್ನೆ 'ಶಬರಿ'ಯನ್ನೋದಿ 'ನನಗಿಂಥವೆಲ್ಲ ತುಂಬಾ ಇಷ್ಟವಾಗುತ್ವೆ' ಅಂತ ಬರೆದಿದ್ದ, ತಕ್ಷಣ ನಾನು ಉತ್ತರಿಸಿದ್ದೆ, 'ನಿನ್ನ ಮೇಯ್ಲುಗಳಿಗೋಸ್ಕರವೇ ಕಾದು ಕಾದು ನಾನೇ ಶಬರಿಯಾಗಿಬಿಟ್ಟಿದ್ದೆ' ಅಂತಾ ;) ನಾನೂ ನಿಮ್ಮ ಪ್ರತಿಕ್ರಿಯೆಗಳಿಗೆ ಎಷ್ಟೊಂದು ಟ್ಯೂನ್ ಆಗಿಬಿಟ್ಟಿದ್ದೇನೆ ಎಂದರೆ, ಪ್ರತೀ ವಾರದ ಹರಟೆಯ ನಂತರ 'ಸ್ಕೈಪ್' ನಲ್ಲಿ ನನ್ನೊಬ್ಬ ಸ್ನೇಹಿತನೊಂದಿಗೆ ಚಾಟ್ ಮಾಡದಿದ್ದರೆ, ಅವನು ನನ್ನ ಹರಟೆಯ ಬಗ್ಗೆ ಏನೊಂದನ್ನಾದರೂ ಹೇಳದಿದ್ದರೆ ನನಗೆ ನನ್ನ ಹರಟೆ ಚೆನ್ನಾಗಿಯೇ ಇಲ್ಲವೇನೋ, ಬರೀ ಕಾಡುಹರಟೆಯಾಯಿತೇನೋ ಎನಿಸಿ ಬೇಜಾರಾಗುತ್ತದೆ. ಕೆಲವು ಸ್ನೇಹಿತರು ನನ್ನೆಲ್ಲ ಹರಟೆಗಳನ್ನೆಲ್ಲ ಓದಿ ಅವುಗಳನ್ನು ಒಂದೊಂದರಂತೆ ಹೆಸರಿಸಿ ಅವುಗಳಲ್ಲಿ ಅವರಿಗೇನು ಇಷ್ಟವಾಯಿತು, ಏನು ಇಷ್ಟವಾಗಲಿಲ್ಲ, ಅದು ಹೇಗಿದ್ದರೆ ಇನ್ನೂ ಚೆನ್ನಾಗಿ ಆಗುತ್ತಿತ್ತು ಎಂದೆಲ್ಲ ವಿವರವಾದ ವಿಮರ್ಶೆಗಳನ್ನು ಮಾಡಿದ್ದಾರೆ, ಇನ್ನೂ ಕೆಲವರು ನನ್ನ 'ಮೊದಲನೇ ಹಾಡು' ಓದಿ 'ಹೇಳ್ಕೋಬಿಡು ಗುರೂ ಹುಡುಗಿ ಖಂಡಿತಾ ಒಪ್ಕೋತಾಳೆ' ಅಂತಾ ಪೀಡಿಸಿದ್ದಾರೆ :) ಮತ್ತು 'ಅವರು' ಕೇವಲ ನನ್ನ ಇಂಗ್ಲೀಷಿನ ಒಂದು ಹರಟೆಯನ್ನೋದಿ (ಕನ್ನಡ ಓದಲು ಅಷ್ಟಾಗಿ ಬಾರದು) 'ತುಂಬಾ ಚೆನ್ನಾಗಿ ಬರೀತೀಯ' ಅಂತ ಸರ್ಟಿಫಿಕೇಟು ಕೊಟ್ಟಿದ್ದಾರೆ :)

ಹೀಗೆ ನೀವೆಲ್ಲ ಬರೆದ ಪ್ರತಿಯೊಂದು ಮೇಯ್ಲು, ಮಾಡಿದ ಪ್ರತಿಯೊಂದು ಫೋನೂ ನನಗೆ ಸಕತ್ ಖುಷಿ ಕೊಟ್ಟಿವೆ, ಅಚಾನಕ್ಕಾಗಿ, ಅನಿರೀಕ್ಷಿತವಾಗಿ ಯಾರಿಂದಲೋ ಬಂದ ಪ್ರತಿಕ್ರಿಯೆಗಳೆಲ್ಲ ನನ್ನ ನೆನಪಿನ ಸಂದೂಕದಲ್ಲಿ ಭದ್ರವಾಗಿವೆ. ಅವುಗಳಲ್ಲಿ ತೀರಾ ಇತ್ತೀಚಿನದೊಂದನ್ನು ನಾನಿಲ್ಲಿ ಹಂಚಿಕೊಳ್ಳಲೇಬೇಕು.

ನನ್ನ ಸ್ಕೂಲಿನ ಅಲ್ಯುಮ್ನಿ ಸಮಾರಂಭಕ್ಕೆ ಹೋಗಿ ನನ್ನೊಬ್ಬ ಸ್ನೇಹಿತ ಅಪಘಾತದಲ್ಲಿ ಮಡಿದ ಸುದ್ದಿ ಕೇಳಿ, ಮನನೊಂದು, ಅದೇ ಗುಂಗಿನಲ್ಲಿ ಬಂದು 'ಸಾವು-ನೋವು ಮತ್ತು ಸುದ್ದಿ' ಬರೆದೆ. ಬರೆದವನು ನಿಮಗೆಲ್ಲ ಮೇಯ್ಲ್ ಮಾಡಿ ಕುಳಿತೆ... ಸರಿಯಾಗಿ ಹತ್ತೊಂಬತ್ತು ನಿಮಿಷಗಳಿಗೆ ಹೆಚ್‌ಪಿಯಲ್ಲಿ ಕೆಲಸ ಮಾಡುತ್ತಿರುವ ನನ್ನೊಬ್ಬ ಸ್ನೇಹಿತನ ಉತ್ತರ ಬಂದೇ ಬಿಟ್ಟಿತು. 'ನಿನ್ನೆಲ್ಲ ಬರಹಗಳೂ ನನಗೆ ತುಂಬಾ ಇಷ್ಟವಾಗುತ್ತೆ. ಇದು ಮಾತ್ರ ನನ್ನ ಅಳೋತರ ಮಾಡಿಬಿಡ್ತು. infact ನಾನು ತುಂಬಾ ಸೆಂಟಿ ಹುಡುಗ. ಮೋಸ್ಟ್ಲಿ ಅದ್ರಿಂದಾನೇ ನಂಗೆ ಅಳು ಬಂತು ಅನ್ಸುತ್ತೆ, ಈಗ್ಲೂ ಅಳ್ತಾನೇ ಟೈಪ್ ಮಾಡ್ತಾ ಇದೀನಿ...'

ಇದಕ್ಕೂ ಮೀರಿದ ನನ್ನ ಹರಟೆಗೆ ಸಿಕ್ಕ ಅತ್ಯುತ್ತಮ ಮತ್ತು ಅತೀಕೆಟ್ಟ ವಿಮರ್ಶೆ/ಪ್ರತಿಕ್ರಿಯೆ/ಕಾಂಪ್ಲಿಮೆಂಟ್ ಎಂದರೆ ನನ್ನದೇ ಹರಟೆ ಬೇರೊಬ್ಬ ಲೇಖಕರ ಹೆಸರಿನಲ್ಲಿ ನನಗೇ ಫಾರ್ವರ್ಡ್ ಆಗಿ ಬಂದಿದ್ದು! ನನ್ನ ಹಳೇ ಸಹೋದ್ಯೋಗಿಯೊಬ್ಬ ನನಗೆ ಫಾರ್ವರ್ಡ್ ಮಾಡಿದ 'ಹೆಸರಿಲ್ಲದ ಒಂದು ಸ್ವಗತ'ದ ಕೆಳಗೆ ನನ್ನ ಹೆಸರ ಬದಲಾಗಿ ಬೇರೊಬ್ಬರ ಹೆಸರು-

‘ಜಗದೀಶ’ನೋ ಏನೋ ಇತ್ತು,! ಅದರ ತಲೆ ಬರಹವೂ ಬದಲಾಗಿತ್ತು, ‘ಅಮ್ಮನ ಪ್ರೀತಿಯೂ ಮತ್ತು ವೀಕೆಂಡೂ’! ಮೊನ್ನೆ ಮೊನ್ನೆವರೆಗೆ ಜತನದಿಂದ ಕಾಯ್ದಿರಿಸಿಕೊಂಡಿದ್ದ ಆ ಮೇಯ್ಲು ಕಂಪನಿ ಬದಲಾಯಿಸಿದಾಗ ಕಳೆದು ಹೋಯ್ತು...

...ನನ್ನ ಬಗ್ಗೆ, ನನ್ನ ಹರಟೆಯ ಬಗ್ಗೆ, ಅವುಗಳಿಗೆ ಬಂದ ನಿಮ್ಮ ಪ್ರತಿಕ್ರಿಯೆಗಳ ಬಗ್ಗೆ ಬರೆದು ಬರೆದೂ ಸುಸ್ತಾಯ್ತು, ಬರೀ ಇಪ್ಪತ್ತೈದು ಬರಹಗಳಿಗೇ ಇಷ್ಟೊಂದು ಪ್ರತಿಕ್ರಿಯೆಗಳು ಸಿಕ್ಕುತ್ತವೆ ಅಂತಾ ನಾನೆಣಿಸಿರಲಿಲ್ಲ, ಅಷ್ಟಕ್ಕೂ ಇಷ್ಟೊಂದನ್ನೆಲ್ಲ ನಾನು ಬರೆಯುತ್ತೇನೆ ಅಂತಾ ಕೂಡ ಅಂದುಕೊಂಡಿರಲಿಲ್ಲ. ಈಗ ಬರೆದುದ್ದಾಗಿದೆ, ನಿಮ್ಮೆಲ್ಲರ ತಲೆ ತಿಂದುದ್ದಾಗಿದೆ, ಇನ್ನೂ ಬರೆಯಬೇಕೆಂದುಕೊಂಡಿದ್ದೇನೆ :) (ನನ್ನಿಂದ ಬಚಾವಾಗಲು ನಿಮಗೆ ಇದೇ ಕಡೇ ಅವಕಾಶ!) ನಿಮ್ಮೆಲ್ಲರ ನಿಲುಕಿಗೆ ಸಿಕ್ಕದ್ದನ್ನು, ಸಿಕ್ಕಿಯೂ ನೀವು ವ್ಯಕ್ತಪಡಿಸಲಾಗದೇ ಚಡಪಡಿಸಿದ್ದನ್ನು, ಇಂಟರ್‌ನೆಟ್ಟಿನಲ್ಲಿ–ಎಸ್ಸೆಮೆಸ್ಸುಗಳಲ್ಲಿ ಸಿಗದಂತಹುದನ್ನು ಬರೆದು, ನಿಮ್ಮೊಂದಿಗೆ ಹಂಚಿಕೊಂಡು ಇನ್ನೂ ಸಂತೋಷಪಡೋಣ ಎಂದುಕೊಂಡಿದ್ದೇನೆ, ಏನಂತೀರಿ?

**ಧನ್ಯವಾದಗಳು...**